## ಕನ್ನಡ ನುಡಿ ಚಂದ ಚಿಲಿಪಿಲಿ ಶ್ರೀಗಂಧ

'ಕನ್ನಡ ನುಡಿ ಚಂದ ಚಿಲಿಪಿಲಿ ಶ್ರೀಗಂಧ' ಚಂದ್ರಗೌಡ ಕುಲಕರ್ಣಿ ಅವರ ಈವರೆಗಿನ ಮಕ್ಕಳ ಕವಿತೆಗಳ ಸಂಕಲನ. ಎಂಟು ಸಂಕಲನಗಳ ಸುಮಾರು ಮುನ್ನೂರು ಕವಿತೆಗಳು ಈ ಕೃತಿಯಲ್ಲಿ ಚಿಲಿಪಿಲಿ ಎನ್ನುತ್ತ ಒಟ್ಟುಗೂಡಿವೆ.

ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಬಗೆಗಿನ ಕವಿತೆಯಲ್ಲಿ 'ಮಕ್ಕಳ ಕನಸಿಗೆ ರೆಕ್ಕೆಯ ಹಚ್ಚುತ ಹಕ್ಕಿಯ ಹಾರಿಸಿದ, ಉಕ್ಕಿನ ಹಕ್ಕಿಯ ಹಾರಿಸಿದ' ಎಂದು ಕುಲಕರ್ಣಿ ಅವರು ಬರೆಯುತ್ತಾರೆ. ಈ ಬಣ್ಣನೆ ಮಕ್ಕಳ ಕವಿಯಾಗಿ ಕುಲಕರ್ಣಿ ಅವರಿಗೂ ಅನ್ವಯಿಸುವಂತಹದ್ದು. ಮಕ್ಕಳನ್ನು ಕಲ್ಪನಾಲೋಕದಲ್ಲಿ ವಿಹರಿಸುವಂತೆ ಮಾಡುವುದು, ಆ ಮೂಲಕ ಅವರ ಸೃಜನಶೀಲ ಸಾಧ್ಯತೆಗಳನ್ನು ಉತ್ತೇಜಿಸುವುದು ಮಕ್ಕಳ ಸಾಹಿತ್ಯದ ಪ್ರಮುಖ ಆಶಯಗಳಲ್ಲೊಂದು. ದುರದೃಷ್ಟವಶಾತ್, ಈ ಹೊತ್ತಿನ ಮಕ್ಕಳ ಸಾಹಿತ್ಯದ ಪ್ರಮುಖ ಕೊರತೆಯೇ ಕಲ್ಪನೆಯ ದಾರಿದ್ರ್ಯ. ವಸ್ತುಸ್ಥಿತಿಯ ಹೆಸರಿನಲ್ಲಿ ವರ್ತಮಾನದ ಬಿಕ್ಕಟ್ಟುಗಳನ್ನು ಪರಿಚಯಿಸಲು ಹೊರಟು ಮಕ್ಕಳನ್ನು ಸಾಹಿತ್ಯದಿಂದ ದೂರ ಮಾಡುವ ಪ್ರಯತ್ನಗಳೇ ಹೆಚ್ಚು. ಇದಕ್ಕೆ ಅಪವಾದದಂತಿವೆ ಚಂದ್ರಗೌಡರ ರಚನೆಗಳು.




ಮಕ್ಕಳ ಮನಸ್ಸಿಗೆ ರೆಕ್ಕೆ ಕಟ್ಟುವಷ್ಟು ಸೊಗಸಾದ ಕಲ್ಪನಾಚಿತ್ರಗಳು ಚಂದ್ರಗೌಡರ ಕವಿತೆಗಳಲ್ಲಿವೆ. ಬಲೂನಿಗಾಗಿ ಅಮ್ಮನನ್ನು ಕಾಡುವ ಮಗುವೊಂದು, ರಬ್ಬರಿನ ಪುಗ್ಗೆಯನ್ನು ಒಲ್ಲೆನೆನ್ನುತ್ತ, 'ಚಂದ್ರನಿಗೊಂದು ದಾರಾ ಕಟ್ಟಿ ನನ್ನ ಕೈಗೆ ಕೊಡು' ಎಂದು ಕೇಳುತ್ತದೆ. ಮಕ್ಕಳಿಗೆ 'ಉದ್ದನೆಯ ಬಾಲ ಇದ್ರೆ' ಏನಾಗುತ್ತಿತ್ತು ಎನ್ನುವ ಪ್ರಶ್ನೆಯನ್ನು ಕೇಳಿಕೊಂಡು, ಕವಿ ನೀಡುವ ಉತ್ತರ: 'ಮಂಗಗಳಂತೆ ಮಕ್ಕಳಿಗೆಲ್ಲ / ಇದ್ದರೆ ಉದ್ದನೆ ಬಾಲ / ಗಿಡ ಗಿಡದಲ್ಲಿ ಕಟ್ಟಬೇಕಿತ್ತು / ಎಲ್ಲಾ ಪ್ರೈಮರಿ ಸ್ಕೂಲ.' ಇಂಥ ಕಲ್ಪನೆಗಳು ಯಾವ ಮಕ್ಕಳನ್ನು ಮರುಳು ಮಾಡುವುದಿಲ್ಲ?

ಚಂದ್ರಗೌಡ ಅವರ ಕವಿತೆಗಳು ರಮ್ಯ ಕಲ್ಪನೆಗಳಿಗೆ ಸೀಮಿತವಾದವುಗಳಲ್ಲ. ವರ್ತಮಾನದ ತವಕ ತಲ್ಲಣಗಳ ಅರಿವೂ ಕವಿಗಿದೆ. 'ಕದಡಿ ಹೋಗಿದೆ ನೆಮ್ಮದಿ' ಕವಿತೆಯನ್ನು ಗಮನಿಸಿ. ನಮ್ಮ ಬದುಕು ಹೇಗೆಲ್ಲ ನೆಮ್ಮದಿಯಿಂದ ದೂರವಾಗಿದೆ ಎನ್ನುವುದನ್ನು ಕವಿ ಸೊಗಸಾಗಿ ಚಿತ್ರಿಸುತ್ತಾರೆ. 'ಬಣ್ಣ ಬಣ್ಣದ ಪೌಚುಗಳಲಿ/ ಜೋತಾಡುವವು ಕುರುಕುರಿ/ ಬಗಲಾನ್ ಕೂಸಿಗೆ ಕೊಡಿಸದಿದ್ದರೆ / ಮಾಡುವುದಲ್ಲ ಕಿರಿಕಿರಿ' ಎಂದು ಆರಂಭಗೊಳ್ಳುವ ಕವಿತೆ, 'ದೊಡ್ಡ ದನಿಯಲಿ ಕಿರುಚುತಲಿರುವವು / ಎಲ್ಲರ ಕೈಲಿರೊ ಮೊಬೈಲು! / ಬಣ್ಣದ ಟಿ.ವಿ. ಗದ್ದಲ ಮಾಡ್ತಿವೆ / ಸಣ್ಣ ದೊಡ್ಡ ಮನೆಯಲ್ಲು' ಎನ್ನುವ ಮೂಲಕ ಈ ಹೊತ್ತಿನ ಮನೆಮನೆ ಕಥೆ-ವ್ಯಥೆಯನ್ನು ಚಿತ್ರಿಸುತ್ತದೆ.

ಹೊಸ ಕಥೆಗಳ ಜೊತೆಗೆ ಹಳೆಯ ಕಥನಗಳನ್ನು ತಮ್ಮ ಕವಿತೆಗಳಲ್ಲಿ ಹೊಸತಾಗಿ ಕಟ್ಟುವ ಕೆಲಸವನ್ನೂ ಚಂದ್ರಗೌಡರು ಸೊಗಸಾಗಿ ಮಾಡಿದ್ದಾರೆ. ಮಕ್ಕಳು ಲಯಬದ್ಧವಾಗಿ ಹಾಡಿಕೊಳ್ಳಬಹುದಾದ ಪದ್ಯಗಳು ಸಾಕಷ್ಟಿವೆ. ಪುಸ್ತಕದ ಶೀರ್ಷಿಕೆಯನ್ನು ನಿಜಗೊಳಿಸುವಷ್ಟು ಚಂದನೆ ಭಾಷೆ ಇಲ್ಲಿನ ರಚನೆಗಳದು.

**ಕನ್ನಡ ನುಡಿ ಚಂದ ಚಿಲಿಪಿಲಿ ಶ್ರೀಗಂಧ; ಲೇ: ಚಂದ್ರಗೌಡ ಕುಲಕರ್ಣಿ; ಪು: 408; ಬೆ: ರೂ. 400;**
**ಪ್ರ: ಚಿಲಿಪಿಲಿ ಪ್ರಕಾಶನ, ಧಾರವಾಡ; ಫೋನ್: 0836-2447360**